ಸಿ.ಸಿ.2292/2024 ಪಿಡಬ್ಲ್ಯೂ-1

ದಿನಾಂಕಃ 04.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದಃ**

ನನ್ನ ಹೆಸರು ಎನ್.ಆರ್ ರಘುನಾಥ್, ನನ್ನ ವಿಳಾಸವು ನಂದೀಪುರ ಪೋಸ್ಟ್ ಮೂಡಿಗೆರೆ ತಾಲ್ಲೂಕು. ನಾನು ವೃತ್ತಿಯಲ್ಲಿ ಕೃಷಿಕ. ನಿಪಿ-1 ರಲ್ಲಿರುವ ಸಹಿಯನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಕೆಳಗೂರು ಶಾಖೆಗೆ ಸಂಬಂಧಿಸಿದ್ದು ಬ್ಯಾಂಕ್ ನ ಹೆಸರು ನೆನಪಾಗುತ್ತಿಲ್ಲ. ಆರೋಪಿಯು ಕಳೆದ 10 ವರ್ಷದಿಂದ ನನಗೆ ಪರಿಚಯಸ್ಥರಾಗಿರುತ್ತಾರೆ. ಆರೋಪಿಗೆ 2 ಲಕ್ಷ ಮೊತ್ತವನ್ನು ಸಾಲ ನೀಡಿರುವ ಬಾಬ್ತು ಯಾವುದೇ ಲಿಖಿತ ದಾಖಲಾತಿಯು ಇರುವುದಿಲ್ಲ ಆದರೆ ಚೆಕ್ ನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಹಣವನ್ನು ನೀಡಿ ಹಲವು ವರ್ಷಗಳು ಕಳೆದ ಕಾರಣ ಸದರಿ ದಿನಾಂಕ ನೆನಪಾಗುತ್ತಿಲ್ಲ. ಆರೋಪಿಗೆ ರೂ.1,85,000/- ಖಾತೆಯ ಮುಖಾಂತರ ಮತ್ತು ರೂ.10,000/- ನಗದಿನ ಮೂಲಕ ನೀಡಿರುತ್ತೇನೆ. ಆರೋಪಿಗೆ ನಗದಿನ ರೂಪದಲ್ಲಿ ನೀಡಿರುವ ಸಾಲಕ್ಕೆ ಯಾವುದೇ ಲಿಖಿತ ದಾಖಲಾತಿ ಇರುವುದಿಲ್ಲ. ನಾನು ಆರೋಪಿಗೆ ಹಣವನ್ನು ನೀಡುವ ಸಮಯದಲ್ಲಿ ಅವರ ತಂದೆ ಹಾಜರಿದ್ದರು. ನಾನು ಹಣಕಾಸು ವ್ಯವಹಾರವನ್ನು ಮಾಡಲು ಯಾವುದೇ ಪರವಾನಿಗೆಯನ್ನು ಹೊಂದಿರುವುದಿಲ್ಲ. ಆರೋಪಿಯು ಕೆಲಸಕ್ಕೆ ಜನರನ್ನು ಬಿಡುತ್ತಿದ್ದ ಕಾರಣ ಮತ್ತು ನನ್ನ ತೋಟಕ್ಕೂ ಕೆಲಸಕ್ಕೆ ಜನರನ್ನು ಬಿಡುತ್ತಿದ್ದರು ಅದರ ಬಾಬ್ತು ಆರೋಪಿಗೆ ಹಣವನ್ನು ನೀಡಿರುತ್ತೇನೆ.

ಜನರನ್ನು ಕೆಲಸಕ್ಕೆ ಬಿಡುವುದರ ಬಾಬ್ತು ನಮ್ಮಗಳ ನಡುವೆ ಯಾವುದೇ ಒಪ್ಪಂದದ ಕರಾರು ಆಗಿರುವುದಿಲ್ಲ. ಆರೋಪಿಯು ನನಗೆ ಕೆಲಸಕ್ಕೆ ಜನರನ್ನು ಕಳುಹಿಸಿಕೊಡಲು ಒಪ್ಪಿದ್ದ ಬಾಬ್ತು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿಯಾಗಿ ನಮ್ಮ ತೊಟಕ್ಕೆ ಜನರನ್ನು ಕಳುಹಿಸಿದ ಬಾಬ್ತು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ತೋಟಕ್ಕೆ ಜನರನ್ನು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿನಲ್ಲಿ ತೋಟ ಇರುವ ಬಾಬ್ತು ಯಾವುದೇ ಕಂದಾಯ ದಾಖಲಾತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿಗೆ ನಾನು ನೀಡಿರುವ ಸೂಚನಾವಳಿ ಪ್ರತಿ ತಲುಪಿರುವ ಬಾಬ್ತು ನನಗೆ ಕುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸೂಚನಾವಳಿಯನ್ನು ನೀಡಿದ ಸಮಯದಲ್ಲಿ ಇದ್ದ ವಿಳಾಸವು ನನಗೆ ತಿಳಿದಿತ್ತು ಆದರೆ ಪ್ರಸ್ತುತವಾಗಿ ಆರೋಪಿಯು ಎಲ್ಲಿ ವಾಸಿಸುತ್ತಿರುತ್ತಾರೆ ಎಂದು ತಿಳಿದಿರುವುದಿಲ್ಲ. ಬ್ಯಾಂಕ್ ನ ಮುಖಾಂತರ ಆರೋಪಿಗೆ ಹಣವನ್ನು ನೀಡಿರುವ ಬಾಬ್ತು ಯಾವುದೇ ದಾಖಲತಿಯನ್ನು ಹಾಜರುಪಡಿಸಿರುವುದಿಲ್ಲ ಆದರೆ ಅವಶ್ಯಕತೆ ಇದ್ದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗೆ ನಾನು ಹಣ ನೀಡಿರುವ ಬಾಬ್ತು ನನ್ನ ಹೇಳಿಕೆಯನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲಾತಿಗಳು ನನ್ನ ಪರವಾಗಿ ಗುರುತಿಸಲಾಗಿರುವುದಿಲ್ಲ ಎಂದರೆ ಸಾಕ್ಷಿಯು ಅಗತ್ಯ ಇದ್ದಲ್ಲಿ ಅವುಗಳನ್ನು ನಾನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ನನ್ನ ವಕೀಲರು ಹೇಳಿದಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಮೂಡಿಗೆರೆ.